ಸ್ಪಷ್ಟವಾಗಿ ಬಂದಿತ್ತು. ಕಮಿಷನರ್ ಸಾಹೇಬರು ಬಡಪಟ್ಟಿಗೆ ಬಗ್ಗುವವರಲ್ಲ ಎಂಬುದು ಇಲಾಖೆಯಲ್ಲಿ ಎಲ್ಲರಿಗೂ ಗೊತ್ತಿರುವ ವಿಷಯ. ಆಗ ಕಾಣಿಕ್ಯರಾಜು, "ನೋಡಿ ದೇವೇಗೌಡ್ರೆ, ಇಂಥ ಸರ್ವೀಸ್ ವಿಷಯಗಳನ್ನು ಅರೆದು ಕುಡಿದಿರೋರು ಸ್ಟೇಟ್ ಆಡಿಟ್ ಡಿಪಾರ್ಟ್‌ಮೆಂಟ್‌ನಲ್ಲಿ ಒಬ್ರವ್ರೆ. ಹೆಸರು ಮಾಳಿಗಚಾರ್ ಅಂತ. ಒಂದಿಷ್ಟು ಖರ್ಚಾಗ್ತೈತೆ. ಏನಿಲ್ಲ, ಟ್ಯಾಂಕ್ ಬಂಡ್ ರೋಡಿನ ಲಾರ್ಡ್ಸ್ ಬಾರ್ ಅಂಡ್ ರೆಸ್ಟೋರೆಂಟಿನಲ್ಲಿ ಕುಳಿತ ಅರ್ಧ ಬಾಟ್ಲು ಓಲ್ಡ್ ಮಾಂಕ್ ರಮ್ಮು, ಎರಡು ಪ್ಲೇಟ್ ಚಿಲ್ಲಿ ಪೋರ್ಕ್ ಮುಂದೆ ಕುಂತ್ರೆ ಅವರ ಬ್ರೈನಿನಲ್ಲಿ ಎಂತೆಂಥಾ ಅದ್ಭುತ ಐಡಿಯಾಗಳು ಹೊರಕ್ಕೆ ಬರ್ತಾವೆ ಗೊತ್ತಾ." ಎಂದ. ಅದಕ್ಕೆ ದೇವೇಗೌಡ, "ಅಯ್ಯೊ ಅಷ್ಟೇನ್ರಿ ಕಾಣಿಕ್ಯರಾಜು, ಈಗ್ಲೇ ಫೋನ್ ಮಾಡ್ರಿ, ಬಿಡುವಾಗಿದ್ರೆ ಸಂಜೆ ಆರೂವರೆ ಗಂಟೆಗೆ ಲಾರ್ಡ್ಸ್ ಹತ್ರ ಬರೋಕೇಳ್ರಿ. ಮತ್ತೆ ನೀವೂ ಇದ್ದೇ ಇರ್ಬೇಕು. ಮುಗಿಸ್ಕಂಡು ಎಂಟು ಗಂಟೆಗೆಲ್ಲ ಮನೆ ಕಡೆ ಹೋಗ್ಬೋದು." ಎಂದು ಅಂಗಿ ಜೇಬಿಗೆ ಕೈ ಹಾಕಿದ್ದ. ಎರಡು ಸಾವಿರ ರೂಪಾಯಿಯ ಹೊಸ ನೋಟು ಕರಕರ ಎಂದು ಬೆರಳಿಗೆ ತಾಕಿ ಸಮಾಧಾನವಾಗಿತ್ತು. "ನನ್ತಾವ ಸಾವಿರದ ಎಂಟುನೂರು ಇದೆ ದೇವೇಗೌಡ." ಎಂದು ಪೆಂಚಾಲಯ್ಯನೂ ಪ್ಯಾಂಟ್ ಜೇಬಿಗೆ ಕೈ ಇಟ್ಟುಕೊಂಡು ತಡಕಾಡಿದ್ದ. ಅವರ ಎದುರಿನಲ್ಲಿಯೇ ಕಾಣಿಕ್ಯರಾಜು ಮೊಬೈಲ್ ತಗೊಂಡು ಒಂದು ನಂಬರ್ ಒತ್ತಿ ಕಿವಿಗೆ ಇಟ್ಟುಕೊಂಡಿದ್ದ. ಆ ಕಡೆಯಿಂದ ಹಲೋ ಎನ್ನುವ ಸದ್ದು ಕೇಳಿದ ಕೂಡಲೇ ಕಾಣಿಕ್ಯರಾಜು, "ಹಲೋ ನಾನಣ್ಣೋ ಕಾಣಿಕ್ಯರಾಜು. ನಮ್ಮ ಫ್ರೆಂಡ್ ಒಬ್ರುದು ತುಂಬಾ ಇಂಪಾರ್ಟೆಂಟ್ ಕೆಲ್ಸ ಇತ್ತು. ಅದೇ ಸರ್ವೀಸ್ ಮ್ಯಾಟ್ರು. ನೀನಿವೊತ್ತು ಏನಾದ್ರಾಗ್ಲಿ ಸಿಗ್ಲೆ ಬೇಕು. ಆರೂವರೆ ಗಂಟೆಗೆ ಲಾರ್ಡ್ಸ್ ಮುಂದೆ ಕಾಯ್ತ ಇರ್ತೀವಿ. ಮಿಸ್ ಮಾತ್ರ ಮಾಡ್ಬೇಡ." ಎಂದಿದ್ದ. ಆ ಕಡೆಯಿಂದ ಒಪ್ಪಿಗೆಯ ವರ್ತಮಾನ ಬಂದಿರುವುದು ಕಾಣಿಕ್ಯರಾಜುವಿನ ಮುಖಭಾವದಿಂದಲೇ ಗೊತ್ತಾಗಿತ್ತು. "ಆಯ್ತು ಸಾರ್, ಸದ್ಯ ಒಪ್ಪಿಕೊಂಡ್ರು. ನಾನು ಕರೆಕ್ಟಾಗಿ ಆರೂವರೆಗೆ ಬರ್ತೀನಿ." ಎಂದು ಕಾಣಿಕ್ಯರಾಜು ಫೈಲು ಹಿಡಿದುಕೊಂಡು ತನ್ನ ಸೀಟಿನ ಕಡೆ ಹೊರಟ. ಪೆಂಚಾಲಯ್ಯನಿಗೆ ಸಮಾಧಾನವಾದಂತಾಯ್ತು. "ಹೋಗ್ರಿ ಪೆಂಚಾಲ್ ಧೈರ್ಯವಾಗಿರ್ರಿ. ನೀವೇನು ಕೊಲೆ ಮಾಡಿದ್ದಿರೋ ಇಲ್ಲ ಅತ್ಯಾಚಾರ ಮಾಡಿದ್ದಿರೋ ಇಷ್ಟೊಂದು ಹೆದುರ್ಕೋಳ್ಳೋಕೆ." ಎಂದು ಲಾರ್ಡ್ಸ್ ಹೋಟೆಲ್‌ನ ಚಿಲ್ಲಿ ಪೋರ್ಕ್ ನೆನಪಿಸಿಕೊಂಡು ಧೈರ್ಯ ತುಂಬಿದ್ದ ದೇವೇಗೌಡ.

ಏಳು ಗಂಟೆಗೆಲ್ಲಾ ನಾಲ್ಕು ಜನರೂ ಲಾರ್ಡ್ಸ್ ರೆಸ್ಟೋರೆಂಟಿನ ಎರಡನೆಯ ಮಹಡಿಯ ಕಿಟಕಿ ಪಕ್ಕದ ಟೇಬಲ್ಲನ್ನು ಅಲಂಕರಿಸಿದ್ದರು. ಕಿಟಕಿಯ ಮೂಲಕ ಬಸ್‌ಸ್ಟ್ಯಾಂಡ್ ಮತ್ತು ರೈಲು ನಿಲ್ದಾಣಗಳಲ್ಲಿ ದಿಕ್ಕೆಟ್ಟಂತೆ ಓಡಾಡುತ್ತಿರುವ ಜನ ಮತ್ತು ವಿದ್ಯುತ್ ದೀಪಗಳ ಬೆಳಕಲ್ಲಿ ಅಂಥ ಜನರ ನೆರಳುಗಳು ಒಂದನ್ನೊಂದು ತುಳಿಯುತ್ತಾ, ಮರುಕ್ಷಣವೇ ಮಾಯವಾಗುತ್ತಾ, ಒಂದರಲ್ಲಿ ಇನ್ನೊಂದು ತೂರಿ ಭೇದಿಸುತ್ತಾ, ಭೇದಿಸುತ್ತಾ ಸಾಗುವ ದೃಶ್ಯಗಳು ಯಾರ ಗಮನಕ್ಕೂ ಬರುತ್ತಿರಲಿಲ್ಲ. ಮನುಷ್ಯರ ನೆರಳುಗಳು ಬೆಳಕಿನ ತದ್ವಿರುದ್ಧ ದಿಕ್ಕಿನಲ್ಲಿ ಆಟವಾಡುತ್ತವೆಯೇ ಹೊರತು ಬೆಳಕಿನೊಂದಿಗೆ ಎಂದೂ ಮನಸ್ಸು ಮತ್ತು ದೇಹದಂತೆ ಅನುಸಂಧಾನಗೊಳ್ಳುವುದಿಲ್ಲ. ಮಾಳಿಗಚಾರ್ ಗ್ಲಾಸಿಗೆ ಓಲ್ಡ್ ಮಾಂಕ್ ರಮ್ಮನ್ನು ಹಾಕಿ ಅದರಲ್ಲಿ ಥಮ್ಸ್‌ಅಪ್ ಬೆರೆಸಿ ಅವೆರಡರ ಸಂಯೋಜನೆಯಿಂದ ಉಂಟಾದ ಮುತ್ತಿನಂಥ ಸಣ್ಣ ಸಣ್ಣ ಬುರುಗು ಗುಳ್ಳೆಗಳ ಕಡೆ ಬೆರಗಿನಿಂದ ನೋಡುತ್ತಾ, "ಏನ್ ಕಾಣಿಕ್ಯರಾಜು ಪ್ರಾಬ್ಲಂ?" ಎಂದು ಕೇಳಿದ್ದ. ಪೆಂಚಾಲಯ್ಯ, ದೇವೇಗೌಡ, ಕಾಣಿಕ್ಯರಾಜು ಮೂವರೂ ತಮ್ಮ ತಮ್ಮ ಗ್ಲಾಸುಗಳಿಗೆ ತಣ್ಣನೆಯ ಕಿಂಗ್ ಫಿಶರ್ ಬಿಯರನ್ನು ಹಾಕಿಕೊಂಡಿದ್ದರು. "ಮೊದ್ಲು ಚಿಯರ್ಸ್ ಹೇಳಿ ಸಾರ್." ಎಂದು ಕಾಣಿಕ್ಯರಾಜು ಗ್ಲಾಸನ್ನು ಎತ್ತಿದ. ಮಿಕ್ಕ ಮೂವರೂ ಕಾಣಿಕ್ಯರಾಜು ಗ್ಲಾಸಿಗೆ ಗ್ಲಾಸುಗಳನ್ನು ಮೆಲ್ಲಗೆ ಡಿಕ್ಕಿ ಹೊಡೆಸಿ ಮೂತಿಗಳಿಗೆ ಇಟ್ಟುಕೊಂಡಿದ್ದರು. ದೇವೇಗೌಡ ಬಿಯರ್